ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಹಾಗೂ ಕೆಲವು ಕಾರ್ಖಾನೆಗಳ ಹಾಲಿ ಇರುವ ಸಾಮರ್ಥ್ಯ ವಿಸ್ತರಣೆಗೆ ಸರ್ಕಾರವು ಕ್ರಮ ಕೈಗೊಂಡಿದೆ.

ಈ) ಬೆಲ್ಲದ ಬೆಲೆಯಲ್ಲಿ ಸಾಮಾನ್ಯವಾಗಿ ಏರಿಕೆ ಸ್ಥಿರವಾಗಿರುವುದಿಲ್ಲ. ಬೆಲ್ಲದ ಬೆಲೆಯಲ್ಲಿ ಏರು ಪೇರು ಉಂಟಾಗುತ್ತಿರುತ್ತದೆ. ಆಗ ಕಬ್ಬಿನ ಗಾಣದ ಮಾಲೀಕರು ಕೊಡುವ ಕಬ್ಬಿನ ಬೆಲೆಯಲ್ಲೂ ಏರು ಪೇರಾಗುತ್ತದೆ. ಬೆಲ್ಲದ ಬೆಲೆ ಕುಸಿದಾಗ ಕಬ್ಬಿನ ಗಾಣಗಳು ಸ್ಥಗಿತಗೊಂಡು ರೈತರು ಉತ್ಪಾದಿಸಿದ ಕಬ್ಬನ್ನು ಅರೆಯಲು ಸಾಕಷ್ಟು ವ್ಯವಸ್ಥೆ ಇಲ್ಲದಂತಹ ಪರಿಸ್ಥಿತಿ ಉಂಟಾಗುತ್ತದೆ. 1990-91 ಮತ್ತು 1991-92ನೇ ಸಾಲುಗಳಲ್ಲಿ ಈ ಅನುಭವ ರಾಜ್ಯದಲ್ಲಿ ಉಂಟಾಗಿರುತ್ತದೆ. ಅಲ್ಲದೆ, ಕಬ್ಬಿನ ರಸ ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬಿನ ಗಾಣಗಳಿಗಿಂತ ಬಹಳ ಉತ್ತಮವಾಗಿರುತ್ತದೆ. ರೈತರು ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗಳ ಮೂಲಕ ಅರೆಯುವಂತಾಗುವ ಒಂದು ಶಾಶ್ವತ ವ್ಯವಸ್ಥೆ ಏರ್ಪಾಟು ಮಾಡುವುದು ಮತ್ತು ಆ ನಿಟ್ಟಿನಲ್ಲಿ ಪ್ರೋತ್ಸಾಹ ನೀಡುವುದು ರೈತರ, ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದಾಗಿರುತ್ತದೆ.

ಮುಳಬಾಗಿಲು ಟೌನ್ನಲ್ಲಿ ಎಸ್.ಸಿ.ಕಾಲೇಜು ವಿದ್ಯಾರ್ಥಿನಿಲಯ.

714 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಲು) : ಮಾನ್ಯ ಸಮಾಜ ಕಲ್ಯಾಣ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ಮುಳಬಾಗಲು ಪಟ್ಟಣದಲ್ಲಿ ಹರಿಜನ ಗಿರಿಜನ ಕಾಲೇಜು ವಿದ್ಯಾರ್ಥಿನಿಲಯ ಕಟ್ಟಲು ಯಾವಾಗ ಪ್ರಾರಂಭಿಸಲಾಯಿತು.

ಆ. ಅದರ ಒಟ್ಟು ಅಂದಾಜು ವೆಚ್ಚ ಎಷ್ಟು ಮತ್ತು ಒಟ್ಟು ಎಷ್ಟು ಕಟ್ಟಡಗಳನ್ನು ಕಟ್ಟಲಾಗುವುದು.

ಇ. ಇಷ್ಟು ವರ್ಷ ಆದರೂ ಮಂಜೂರಾತಿ ಕೊಡಲು ನಿಧಾನವಾಗಿರುವುದಕ್ಕೆ ಕಾರಣಗಳೇನು.

ಈ. ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಪರಿಷತ್ತಿನ ಹಣದಿಂದ ಆ ಕಟ್ಟಡ ಕಟ್ಟಲು ಪ್ರಾರಂಭ ಮಾಡಲು ಅನುಮತಿ ಕೊಡಲು ಇರುವ ತೊಂದರೆಗಳೇನು.

ಉ. ಕನಿಷ್ಠ ಮೊದಲನೆಯ ಅಂತಸ್ತನ್ನಾದರೂ ಕಟ್ಟಲು ಅನುಮತಿ ನೀಡಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ. ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿ ಇನ್ನೂ ಪ್ರಾರಂಭಿಸಿರುವುದಿಲ್ಲ.

ಆ. ಸದರಿ ವಿದ್ಯಾರ್ಥಿನಿಲಯ ಕಟ್ಟಡದ ಅಂದಾಜು ವೆಚ್ಚ ರೂ. 30.00 ಲಕ್ಷ. ಒಂದು ಕಟ್ಟಡ ಕಟ್ಟಲಾಗುವುದು.

ಇ. ಸದರಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು ಜಿಲ್ಲಾ ಪಂಚಾಯತ್ ವತಿಯಿಂದ ಕಟ್ಟುವ ಷರತ್ತಿನ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ: ಎಸ್ಡಬ್ಲ್ಯೂಎಲ್. 396 ಎಸ್ಇಡಬ್ಲ್ಯೂ 90 ದಿ. 12-2-92ರಲ್ಲಿ ರೂ. 25 ಲಕ್ಷ.ಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿತ್ತು. ಆದರೆ 1991-92 ಮತ್ತು 92-93ನೇ ಸಾಲಿನ ಜಿಲ್ಲಾ ಆಯವ್ಯಯದಲ್ಲಿ ಜಿಲ್ಲಾ ಪರಿಷತ್ತಿನವರು ಈ ವಿದ್ಯಾರ್ಥಿನಿಲಯದ ನಿರ್ಮಾಣಕ್ಕಾಗಿ ಹಣ ಒದಗಿಸಿಕೊಳ್ಳದ್ದಿದ್ದುದೇ ನಿಧಾನಕ್ಕೆ ಕಾರಣವಾಗಿದೆ.

ಈ) ಮತ್ತು ಉ) ಯಾವುದೇ ತೊಂದರೆ ಇರುವುದಿಲ್ಲ. ಸದರಿ ಕಟ್ಟಡದ ನಿರ್ಮಾಣಕ್ಕಾಗಿ ಜಿಲ್ಲಾ ಪರಿಷತ್ತು ಕಾಲು ಭಾಗದ ಹಣವನ್ನು ಒದಗಿಸಿಕೊಂಡಿರುವುದರಿಂದ 30.00 ಲಕ್ಷ ರೂ.ಗಳ ಪರಿಷ್ಕೃತ ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಅವರಿಂದ ಬಂದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 22-3-94ರಂದು ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಕಇ 321 ಪಕವಿ 91ರಲ್ಲಿ ಈಗಾಗಲೇ ನೀಡಲಾಗಿದೆ.